ಗಟ್ಟಿಲೆ ಕಾಯುಬೇಕು. ಏಳಂಬ ತಪ್ಪಿಸಬೇಕಾದರೆ, ನ್ಯಾಯ ದೊರಕಬೇಕಾದರೆ ಕೂಡ '' ಕೈ '' ಬೆಚ್ಚಗೆ ಮಾಡಬೇಕಾಗುತ್ತದೆ ಎಂಬ ದೂರು ಎಲ್ಲಾ ಕಡೆ ಇದೆ. ಟೌನ್ ಪ್ಲಾನಿಂಗ್ ಅಥಾರಿಟಿ ಇರಲಿ, ಕಂದಾಯ ಇಲಾಖೆ ಇರಲಿ, ಎಲ್ಲೆಡೆಯೂ ಇದೇ ಗೋಳು ಬೇರೆ ಜಿಲ್ಲೆಗಳಲ್ಲಿ ನಿಜವಾಗಿ ಕೃಷಿಗಾಗಿ ಉಪಯೋಗಿಸಲ್ಪಡುತ್ತಿರುವ ಭೂಮಿಯನ್ನು ಕೃಷಿ ಭೂಮಿ ಎಂದೂ, ಉಳಿದ ಜಮೀನನ್ನು ಕೃಷಿಯೇತರ ಭೂಮಿ ಎಂದೂ ವರ್ಗೀಕರಿಸಲಾಗಿದೆ. ಇದೇ ವಿಧಾನ ದಕ್ಷಿಣ ಕನ್ನಡ ಜಿಲ್ಲೆಗೇಕೆ ಅನ್ವಯಿಸಬಾರದು ? ಅಲ್ಲಿಗೇಕೆ ಈ ಮಲತಾಯಿ ಧೋರಣೆ ? ಅಲ್ಲಿನ ಜನರಿಗೇಕೆ ಈ ಅದ್ವಾನ' ಈ ತಾತ್ಸಾರ್ಯ' ಈ ತೊಂದರೆ ? ಕೃಷಿ ಹಾಗೂ ಕೃಷಿಯೇತರ ಭೂಮಿಯ ವರ್ಗೀಕರಣಕ್ಕೆ ತಕ್ಷಣ ಕ್ರಮ ಕೈಕೊಳ್ಳಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ. ಎ. ಲಕ್ಷ್ಮೀಸಾಗರ್ —ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿಯಾ ಯಾವುದೇ ತಾಲ್ಲೂಕಿನಲ್ಲಾಗಲಿ, ಅಥವಾ ಯಾವುದೇ ಜಿಲ್ಲೆಯಲ್ಲಾಗಲೀ, ಇದು ಕೃಷಿ ಜಮೀನು ಅಥವಾ ಕೃಷಿಯೇತರ ಜಮೀನೆಂದು ವರ್ಗ ಮಾಡಿರುವುದಿಲ್ಲ. ಕೇವಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಮಾತ್ರ ಕೃಷಿ ಜಮೀನೆಂದು ಪರಿಗಣಿಸಿದೆ ಎಂದು ಹೇಳುವುದು ಸರಿಯಲ್ಲ. ಕೃಷಿ ಜಮೀನನ್ನು ನಿಯಮಾವಳಿಗಳನ್ವಯ ಕೃಷಿಯೇತರ ಉಪಯೋಗಕ್ಕೆ ಎಂದು ಎಲ್ಲಾ ಕಡೆಯಲ್ಲೂ ಆದೇಶ ಪಡೆಯಬಹುದು. ಆದ್ದರಿಂದ ಕೃಷಿಯೇತರ ಉದ್ದೇಶಕ್ಕೆ ಜಮೀನನ್ನು ಪರಿವರ್ತಿಸಲು ತೊಂದರೆಗಳಾದ ಬಗ್ಗೆ ಯಾವುದೇ ಪ್ರಕರಣವನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಲ್ಲಿ ಶೀಘ್ರವಾಗಿ ಪರಿಶೀಲಿಸಿ ಸಂಬಂಧಪಟ್ಟವರ ಮೇಲೆ ಕಾನೂನಿನನ್ವಯ ಸೂಕ್ತ ಕ್ರಮ ಜರುಗಿಸಲಾಗುವುದು.

೧೮, ಷಹಬಾದ್ ನಗರದ ಎ.ಬಿ.ಎಲ್. ಕಾಲೋನಿಯ ಸಮೀಪದ ರಾವೂರ ಕ್ವಾರಿಯಿಂದ ಬರುತ್ತಿದ್ದಾಗ ಲಾರಿ ಅಪಘಾತಕ್ಕೀಡಾದವರಿಗೆ ಪರಿಹಾರ ನೀಡುವುದು.

ಶ್ರೀ ಕೆ. ಬಿ. ಶಾಣಪ್ಪ (ಷಹಬಾದ್). ಆಧ್ಯಕ್ಷರೇ, ಫೆಬ್ರವರಿ ಅಥವಾ ಮಾರ್ಚಿ ತಿಂಗಳಲ್ಲಿ ಷಹಾಬಾದ್ ನಗರದ ಎ.ಬಿ.ಎಲ್. ಕಾಲೋನಿಯ ಸಮೀಪದಲ್ಲಿ ಟಿ.ಡಬ್ಲ್ಯೂ.ಡಿ. ರೋಡಿನಲ್ಲಿ ರಾವೂರ ಕ್ವಾರಿಯಿಂದ ಸುಮಾರು ೩೫ ಜನ ಬಡ ಕೂಲಿಕಾರರನ್ನು ಹೊತ್ತು ಕೊಂಡು ಬರುತ್ತಿದ್ದ ಲಾರಿ ಬ್ರಿಡ್ಜ್‌ನ್ನು ಹತ್ತುವಾಗ ಡ್ರೈವರನ ನಿರ್ಲಕ್ಷತನದಿಂದಾಗಿ ಅಪಘಾತಕ್ಕೀಡಾಗಿ ಸ್ಥಳದಲ್ಲಿಯೇ ೬ ಜನರು ತೀರಿಕೊಂಡರು. ಈ ಘಟನೆ ನಡೆದಿದ್ದು ಸಂಜೆ ೬ ಗಂಟೆ ಹೊತ್ತಿಗೆ. ಸುಮಾರು ೨೪ ಜನರನ್ನು ಗುಲ್ಬರ್ಗಾ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದ್ದು ಅನೇಕರ ಮೂಳೆ ತಲೆಗಳು ಹೊಡೆದು ಈಗ್ಗೂ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಮೃತರಲ್ಲಿ ೫ ಜನ ಪರಿಶಿಷ್ಟ ವರ್ಗಕ್ಕೆ ಸೇರಿದವರು. ಈ ಬಗ್ಗೆ ಸರ್ಕಾರ ಯಾವುದೇ ಕಾರ್ಯಕ್ರಮ ತೆಗೆದುಕೊಂಡಿಲ್ಲ. ರಾಜ್ಯದ ಎಲ್ಲಾ ಕಡೆಗಳಲ್ಲಿ ಇಂತಹ ಅಪಘಾತಕ್ಕೆ ಈಡಾದವರಿಗೆ ಮಾನ್ಯ ಮುಖ್ಯಮಂತ್ರಿಗಳು ೫೦೦೦ ರೂಪಾಯಿ, ೧೦,೦೦೦ ರೂಪಾಯಿಗಳವರೆಗೆ ಹಣ ಸಹಾಯ ಮಾಡಿದ್ದಾರೆ. ಕಾನೂನು ಪ್ರಕಾರ ಕಾಂಪನ್ ಸೇಷನ್ ಹಣ ದೊರಕಿಸಿಕೊಡಲು ಕಾನೂನು ನೆರವನ್ನು ಈ ಬಡ ಜನರಿಗೆ ಕೊಡುವಂತೆ ನಾನು ಈ ಸದನದ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಸಚಿವರು).—ಆಧ್ಯಕ್ಷರೇ, ದಿನಾಂಕ ೧೪-೩-೧೯೮೮ ರಂದು ಸಂಜೆ ೫-೧೫ ಘಂಟೆಯಲ್ಲಿ ಷಹಬಾದ್ ಕಲ್ಲು.ಗಳನ್ನು ಷಹಬಾದ್ ಟೌನಿನಲ್ಲಿ ಒಂದು ಲಾರಿಯಲ್ಲಿ ಸಾಗಿಸುತ್ತಿದ್ದು ಕೆಲವರು ಕಾರ್ಮಿಕರು ಲೋಡ್ ಮೇಲೆ ಕೂ ೨ ಪ್ರಯಾಣಿಸುತ್ತಿದ್ದರು. ಲಾರಿಯು ಎ.ಸಿ.ಸಿ. ರೈಲಂ ಬ್ರಿಡ್ಜ್ ಬಳಿ ಹತ್ತುವಾಗ ಬ್ಯಾಲೆನ್ಸ್ ತಪ್ಪಿ ತಲೆಕೆಳಗಾಗಿ ಬಿದ್ದಿತು. ಲಾರಿಯ ಲೋಡ್ ಮೇಲೆ ಕುಳಿತಿದ್ದ ಕಾರ್ಮಿಕರಲ್ಲಿ ಮೂವರು ಲೋಡಿನ ಅಡಿಯಲ್ಲಿ ಸಿಕ್ಕಿಕೊಂಡು ಸ್ಥಳದಲ್ಲಿ ಮೃತಪಟ್ಟರು. ಉಳಿದ ಕೆಲವರಿಗೆ ಸಣ್ಣ ಪುಟ್ಟ ಭಾರಿ ಪ್ರಮಾಣದ ಗಾಯಗಳಾದವು. ಗಾಯಗೊಂಡವರಲ್ಲಿ ಕೆಲವರನ್ನು ಷಹಬಾದ್ ಆಸ್ಪತ್ರೆಗೆ ಸೇರಿಸಿದಾಗ ಅವರಲ್ಲಿ ಇಬ್ಬರು ಮರಣ ಹೊಂದಿದರು. ಇನ್ನು ಕೆಲವರು ಗಾಯಗೊಂಡವರನ್ನು ಗುಲ್ಬರ್ಗಾ ಸರ್ಕಾರಿ ಆಸ್ಪತ್ರೆಯಲ್ಲಿ ಸೇರಿಸಲಾಗಿ ಅವರಲ್ಲಿ ಒಬ್ಬರು ಆಲ್ಲಿ ಮೃತಪಟ್ಟಿರುತ್ತಾರೆ. ಈ ಅಪಘಾತದಲ್ಲಿ ಒಟ್ಟು ೬ ಮಂದಿ ಮೃತವಟ್ಟು ೨೦ ಮಂದಿ ಗಾಯಗೊಂಡಿದ್ದಾರೆ. ಈ ಸಂಬಂಧದಲ್ಲಿ ಒಂದು ಪ್ರಕರಣವನ್ನು ನ್ಯಾಯಾಲಯಕ್ಕೆ ಒಪ್ಪಿಸಿಕೊಂಡು ಅಪರಾಧಿ ಜಾಲಕ ದಿಲೀಪನನ್ನು ದಸ್ತಗಿರಿ ಮಾಡಲಾಗಿದೆ.

ಸತ್ತವರನ್ನು ಅವಲಂಬಿಸಿಕೊಂಡಿರುವವರಿಗೆ ದಿನಾಂಕ ೨೦-೩-೧೯೮೮ ರಲ್ಲಿ ಮೋಟಾರ್ ವಾಹನ ಕಾಯಿದೆ ಕಲಂ ೧೧೦ರ ಪ್ರಕಾರ ಪರಿಹಾರವನ್ನು ಪಡೆಯಲು ತಿಳಿಸಲಾಗಿದೆ. ಅದೇ ರೀತಿ ದಿನಾಂಕ ೫-೫-೧೯೮೮ ರಂದು ಗಾಯಗೊಂಡವರಿಗೂ ಸಹ ಅಂತಹುದೇ ನೋಟೀಸನ್ನು ಜಾರಿ ಮಾಡಿ ಪರಿಹಾರವನ್ನು ಪಡೆಯಲು ತಿಳಿಸಲಾಗಿದೆ. ಮೋಟಾರ್ ಅಪಘಾತಗಳಲ್ಲಿ ಸರ್ಕಾರದಿಂದ ಪರಿಹಾರ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಸತ್ತವರ ಅವಲಂಬಿಗಳು ಮತ್ತು ಗಾಯಗೊಂಡವರು ಈಗಾಗಲೇ ಸ್ಥಳೀಯ ಕಾನೂನು ನೆರವು ಮಂಡಳಿಯ ಸಹಾಯವನ್ನು ಕೋರಿರುತ್ತಾರೆ. ಅಪಘಾತದಲ್ಲಿ ಗಾಯಪಡಿಸಿ ಯಾರಿಗೂ ಗೊತ್ತಿಲ್ಲದ ಹಾಗೆ ವಾಹನಗಳು ಪರಾರಿ ಆದ ಸಂದರ್ಭಗಳಲ್ಲಿ ಮಾತ್ರ ಸರ್ಕಾರ ಸೊಲೇಶಿಯನ್ಸ್‌ನಿಧಿಯಿಂದ ಪರಿಹಾರ ಕೊಡಬಲ್ಲುದು. ಉಳಿದ ಅಪಘಾತಗಳಲ್ಲಿ ಸಂಬಂಧಪಟ್ಟ ವಿಮೆ ಕಂಪನಿಗಳು ಪರಿಹಾರ ಕೊಡಬೇಕಾಗುತ್ತದೆ.

೧೯. ಮಡಿಕೇರಿಯ ಗಾಳಿಬೀಡಿನಲ್ಲಿ ನಿರ್ಮಿಸಿದ್ದ ಮಕ್ಕಳ ರೈಲು ಮೂರು ವರ್ಷಗಳಿಂದ ಕೆಟ್ಟು ನಿಂತಿರುವುದು.

ಶ್ರೀ ಡಿ. ಎ. ಚಿಣ್ಣಪ್ಪ (ಮಡಿಕೇರಿ).—೧೯೮೨ರಲ್ಲಿ ಮಡಿಕೇರಿಯ ಗಾಳಿಬೀಡಿನಲ್ಲಿ ಸುಮಾರು ೬ ಲಕ್ಷ ರೂಪಾಯಿಗಳ ವೆಚ್ಚದಿಂದ ನಿರ್ಮಿಸಿದ್ದ ಮಕ್ಕಳ ರೈಲು ಈಗ್ಗೆ ಸುಮಾರು ೩ ವರ್ಷಗಳಿಂದ ಕೆಟ್ಟು ನಿಂತು ರಿಪೇರಿ ಮಾಡಿದ್ದಾಗ್ಯೂ ಯಾವ ಪ್ರಯೋಜನಕ್ಕೂ ಬಾರದೆ ೬ ಲಕ್ಷ ರೂಪಾಯಿಗಳನ್ನು ವ್ಯರ್ಥವಾಗಿ ವೆಚ್ಚ ಮಾಡಿದಂತಾಗಿದೆ. ಅಲ್ಲದೆ ಈ ಸ್ಥಳ ಮಡಿಕೇರಿಯಿಂದ ಸುಮಾರು ೩ ಕಿಲೋ ಮೀಟರ್ ದೂರದಲ್ಲಿರುವುದರಿಂದ ಬಹಳಷ್ಟು ಮಂದಿ ಶಾಲಾ ಮಕ್ಕಳು, ಇತರೆ ಮಕ್ಕಳು ಹಾಗೂ ವಯಸ್ಕರು ವಿಹಾರಕ್ಕಾಗಿ ಅಲ್ಲಿಗೆ ಹೋಗಿ ನಿರಾಶರಾಗಿ ಹಿಂದಿರುಗಿ ಬರುತ್ತಿದ್ದಾರೆ. ಇದರ ಉಪಯೋಗವನ್ನು ಪಡೆಯದೆ ಮಕ್ಕಳಂತೂ ಬಹಳ ಮನ ನೊಂದುಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಮಕ್ಕಳ ರೈಲನ್ನು ಕೂಡಲೇ ರಿಪೇರಿ ಮಾಡಿಸಿ ಮಕ್ಕಳ ಹಾಗೂ ಜನರ ವಿಹಾರಕ್ಕೆ ಅನುಕೂಲ ಮಾಡಿ ಕೊಡಬೇಕೆಂದು ಮತ್ತು ಆ ಸ್ಥಳಕ್ಕೆ ಹೋಗಲು ಸಂಜೆ ೪ ಗಂಟೆಯಿಂದ ೬ ಗಂಟೆಯವರೆಗೆ ಈ ಹಿಂದೆ ಓಡಿಸುತ್ತಿದ್ದಂತೆಯೇ ಸರಕಾರಿ ಬಸ್ಸನ್ನು ಓಡಿಸಬೇಕೆಂದು ಈ ವ್ಯವಸ್ಥೆಯನ್ನು ಕೂಡಲೇ ಕೈಕೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಬಾಲಭವನದ ಅಧಿಕಾರಿಗಳನ್ನು ಕರೆಯಿಸಿ ಆದಷ್ಟು ಬೇಗ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

೨೦. ಸಾಲಿಗ್ರಾಮದ ಪುರಸಭೆ ವ್ಯಾಪ್ತಿಯಿಂದ ಬೆಂಗಳೂರಿಗೆ ಸಂವಿಹಾರಿ ಬಸ್ಸಿನ ಸೌಕರ್ಯವನ್ನು ಒದಗಿಸುವುದು.

ಶ್ರೀ ಬಸವರಾಜ್ (ಬ್ರಹ್ಮಾವರ).—ಉಡುಪಿ ತಾಲ್ಲೂಕಿನಲ್ಲಿರುವ ಸಾಲಿಗ್ರಾಮವು ಒಂದು ಪುರ ಸಭೆಯಾಗಿದ್ದು ಉಡುಪಿ ಕುಂದಾಪುರ ಪಟ್ಟಣಗಳ ಮಧ್ಯೆಯಿರುವ ಪ್ರದೇಶವಾಗಿರುತ್ತದೆ. ಇಲ್ಲಿಂದ ಉಡುಪಿ ಸುಮಾರು ೨೫ ಕಿಲೋಮೀಟರ್ ಹಾಗೂ ಕುಂದಾಪುರಕ್ಕೆ ೨೦ ಕಿಲೋಮೀಟರ್ ದೂರದಲ್ಲಿದೆ. ಸಾಲಿಗ್ರಾಮ ಪುರಸಭೆ ವ್ಯಾಪ್ತಿ ಹಾಗೂ ಆಸುಪಾಸಿನ ಗ್ರಾಮಗಳಿಂದ ಬೆಂಗಳೂರಿಗೆ ದಿನಂಪ್ರತಿ ಸಾಕಷ್ಟು ಸಂಖ್ಯೆಯ ಪ್ರಯಾಣಿಕರಿದ್ದು ಅವರಿಗೆ ಸರಿಯಾದ ಬಸ್ಸಿನ ಸೌಕರ್ಯ ಇರುವುದಿಲ್ಲ. ಅಲ್ಲಿಯ ಜನರು ಈ ವಿಷಯವಾಗಿ ಸಾರಿಗೆ ಸಚಿವರಿಗೆ ಬಸ್ಸಿನ ಸೌಕರ್ಯಕ್ಕಾಗಿ ಮನವಿಯನ್ನು ಸಲ್ಲಿಸಿರುತ್ತಾರೆ. ನಾನು ಕೂಡ ಹಲವಾರು ಬಾರಿ ಸಚಿವರ ಗಮನಕ್ಕೆ ಈ ವಿಷಯವನ್ನು ತಂದಿರುತ್ತೇನೆ. ಕಳೆದ ಅಧಿವೇಶನದಲ್ಲಿ ಸಚಿವರು ಸಧ್ಯದಲ್ಲೆ ಸಾಲಿಗ್ರಾಮದಿಂದ ಬೆಂಗಳೂರಿಗೆ ಪ್ರಯಾಣಿಸುವ ಬಸ್ಸಿನ ಸೌಕರ್ಯವನ್ನು ನೀಡುವುದಾಗಿ ಭರವಸೆ ನೀಡಿದ್ದರೂ ಆ ಭರವಸೆ ಈವರೆಗೆ ಕಾರ್ಯಗತ ಆಗಿರುವುದಿಲ್ಲ. ಆದುದರಿಂದ ಸಾಲಿಗ್ರಾಮಕ್ಕೆ ಕೂಡಲೇ ಒಂದು ಸಂವಿಹಾರಿ ಬಸ್ಸನ್ನು ಒದಗಿಸಿ ಕೊಡಬೇಕಾಗಿ ಸರಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಪಿ ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು).—ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಪೃಥ್ವಿ ಹಂತದಲ್ಲಿ ಬೆಂಗಳೂರಿಗೆ ಎಲ್ಲಾ ಜಿಲ್ಲಾ ಕೇಂದ್ರಗಳಿಂದ ಸಂವಿಹಾರಿ ಸಾರಿಗೆ ಸಂಪರ್ಕವನ್ನು